# ಮಾಹಿತಿ ಹಕ್ಕು ಅಧಿನಿಯಮ ದಡಿ 4(1)ಬಿ ಅನ್ವಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬೇಲೂರು ಕಛೇರಿಯ ವಿವರ

**4(B)(I) ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಲ್ಲಾ ಪಂಚಾಯಿತಿ) ಬೇಲೂರು ರವರ ಜವಾಬ್ದಾರಿ ಮತ್ತು ಕರ್ತವ್ಯಗಳು.**

ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳಾಗಿದ್ದು, ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯನ್ನು ಪ್ರತಿನಿದಿಸುವ ಅಧಿಕಾರಿಗಳಾಗಿರುತ್ತಾರೆ. ತಾಲ್ಲೂಕಿನಲ್ಲಿ ನಡೆಯುವ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಪ್ರತಿನಿದಿ ಸಭೆಗಳಿಗೆ ಹಾಜರಾಗಿ ಇಲಾಖೆಯ ಮಾಹಿತಿಯನ್ನು ಒದಗಿಸುವುದು ಇವರ ಕರ್ತವ್ಯವಾಗಿರುತ್ತದೆ. ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಗಳು, ಜನ ಸಂಪರ್ಕ ಸಭೆಗಳು ಹಾಗೂ ಮೇಲಾಧಿಕಾರಿಗಳು ನಡೆಸುವ  ಪ್ರಗತಿ ಪರಿಶೀಲನಾ ಸಭೆಗೆ ಹಾಜರಾಗುವುದು, ಅಧೀನ ಸಿಬ್ಬಂದಿಗೆ ವೇತನ ಡ್ರಾ ಮಾಡಿ ವಿತರಿಸುವ ಬಟವಾಡೆ ಅಧಿಕಾರಿಗಳಾಗಿರುತ್ತರೆ. ಇವರು ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಸ್ಯ ಕ್ಷೇತ್ರಗಳ ಮೇಲ್ವಿಚಾರಣೆ ಇವರದೇ ಆಗಿರುತ್ತದೆ. ನಿಯಂತ್ರಣಾಧಿಕಾರಿಗಳಿಗೆ ನಿಗದಿತ ಗುರಿ ಸಾಧನೆಯ ಮಾಹಿತಿ ಆರ್ಥಿಕ / ಭೌತಿಕ ವರದಿಗಳು ಸಲ್ಲಿಸುವ ಅಧೀನ ಅಧಿಕಾರಿ/ ನೌಕರರುಗಳಿಗೆ ಜವಾಬ್ದಾರಿಯನ್ನು ವಹಿಸುವ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರೋತ್ಸವ, ಸೆಮಿನಾರ್ ವ್ಯವಸ್ಥೆಗೊಳಿಸುವ ರೈತ ಫಲಾನುಭವಿಗಳ ತಾಕುಗಳನ್ನು ಪರಿಶೀಲಿಸಿ ತಾಂತ್ರಿಕ ಸಲಹೆ ನೀಡುವ ಜವಬ್ದಾರಿ ಹೊಂದಿರುತ್ತಾರೆ. ಸಸ್ಯ ಕ್ಷೇತ್ರಗಳ ಅಭಿವೃದ್ಧಿಗೆ ಹಾಗೂ ಸಸ್ಯೋತ್ಪಾದನೆ ಆದಾಯ ನಿರೀಕ್ಷೆಗೆ ಪೂರ್ಣ ಜವಾಬ್ದಾರರಾಗಿರುತ್ತಾರೆ. ತಾಲ್ಲೂಕುಗಳಲ್ಲಿ ಬೆಳೆಯುವ ತೋಟಗಾರಿಕೆ ಬೆಳಗಳ ಬಗ್ಗೆ ಮಾಹಿತಿ, ಅಧೀನ ಅಧಿಕಾರಗಳಿಗೆ ಮಾರ್ಗದರ್ಶನ.

**4(B)(II) ಅಧಿಕಾರಿ/ ನೌಕರರುಗಳ ಅಧಿಕಾರ ಮತ್ತು ಕರ್ತವ್ಯಗಳು**

| | |
|---|---|
| ತೋಟಗಾರ | ಸಸ್ಯ ಕ್ಷೇತ್ರದಲ್ಲಿ ಕಸಿ ಕಟ್ಟುವಿಕೆ, ಕ್ರಿಮಿ ನಾಶಕ ಸಿಂಪರಣೆ, ಕಳೆ ಕೀಳುವುದು, ನರ್ಸರಿ ಅಭಿವೃದ್ಧಿ, |
| ತೋಟಗಾರಿಕೆ ಸಹಾಯಕ | ಸಾಮಗ್ರಿಗಳಿಗೆ ಬಿಲ್ಲುಗಳನ್ನು ತರುವುದು, ಕ್ಷೇತ್ರಕ್ಕೆ ನೀರಿನ ಸಕಾಲ ನಿರ್ವಹಣೆ, ಲೇಬರ್ ಫೋರ್ ಕ್ಯಾಸ್ಟ್ ತಯಾರಿಸುವುದು ಹಾಗೂ ಕ್ಷೇತ್ರದ ಆದಾಯವನ್ನು ಸರ್ಕಾರಕ್ಕೆ ಜಮಾ ಮಾಡುವುದು, ಸಸ್ಯಾಭಿವೃದ್ಧಿ ಕಾರ್ಯಕ್ರಮವನ್ನು ಗುರಿಯನ್ವಯ ಸಾಧಿಸುವುದು. |
| ಸಹಾಯಕ ತೋಟಗಾರಿಕೆ ಅಧಿಕಾರಿ | ಹೋಬಳಿ ಮಟ್ಟದಲ್ಲಿ ಕಾರ್ಯನಿರ್ವಹುವುದು, ಬೆಳೆಗಳ ಅಭಿವೃದ್ಧಿಗೆ ತಾಂತ್ರಿಕ ಮಾಹಿತಿ ನೀಡುವುದು, ಸರ್ಕಾರದಿಂದ ಸಿಗುವ ಸೌಲಭ್ಯಗಳಬಗ್ಗೆ ರೈತರಿಗೆ ಮಾಹಿತಿ ನೀಡುವುದು, ಫಲಾನುಭವಿಗಳ ಆಯ್ಕೆ, ಕ್ಷೆತ್ರೋತ್ಸವ, ಸೆಮಿನಾರ್ ಗಳ ವ್ಯವಸ್ಥೆ ಮಾಡುವುದು, ಗ್ರಾಮ ಸಭೆಗಳಿಗೆ ಹಾಜರಾಗುವುದು, NHM ತಾಕುಗಳ ಪರಿಶೀಲನೆ ಮಾಡುವುದು, ಜಿಲ್ಲಾ ಮಟ್ಟದ ಅಧಿಕಾರಿಗಳ ಮಾರ್ಗದರ್ಶನಲ್ಲಿ ಸಮುಚಿತ ಪೂರ್ವ ವುವಸ್ಥೆಗಳೊಂದಿಗೆ ನಡೆಯುವ ತೋಟಗಾರಿಕೆ ಅಭಿವೃದ್ಧಿ ಕೆಲಸಗಳಿಗೆ ನಿರ್ಣಾಯಕರಾಗಿರುತ್ತರೆ. |

**4(B)(III) ನಿರ್ಣಯ ತೆಗೆದುಕೊಳ್ಳುವಂತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾದ ಕ್ರಮ, ಮೇಲ್ವಿಚಾರಣಾ ಚಾನಲ್ ಗಳು ಮತ್ತು ಅಕೌಂಟೆಬಿಲಿಟಿ ದಂತೆ.**

| | |
|---|---|
| ತೋಟಗಾರ | ಕ್ಷೇತ್ರ ಸಹಾಯಕರು ಅಥವಾ ಮೇಲ್ಪಟ್ಟ ಅಧಿಕಾರ ವರ್ಗದವರು ವಹಿಸಿಕೊಡಬಹುದಾದಂತಹ ಕೆಲಸಗಳನ್ನು ನಿರ್ವಹಿಸಬಹುದಾಗಿರುತ್ತದೆ. ಯಾವುದೇ ನಿರ್ಣಯಕ್ಕೆ ಅವಕಾಶವಿರುವುದಿಲ್ಲ. |
| ತೋಟಗಾರಿಕೆ ಸಹಾಯಕ | ಉನ್ನತ ಅಧಿಕಾರಗಿಳು ವಹಿಸಿಕೊಡಲಾದ ಕ್ಷೇತ್ರ ನಿರ್ವಹಣೆ ಅಥವಾ ಅಭಿವೃದ್ಧಿಗೆ ಸಂಬಂಧಪಟ್ಟ ಕೆಲಸಗಳನ್ನು ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಯಾವುದೇ ನಿರ್ಣಯಕ್ಕೆ ಅವಕಾಶವಿರುವುದಿಲ್ಲ. |
| ಸಹಾಯಕ ತೋಟಗಾರಿಕೆ ಅಧಿಕಾರಿ | ಪ್ರಸ್ತಾವನೆಗಳನ್ನು ನಿಯಂತ್ರಾಣಾಧಿಕಾರಿಗಳಿಗೆ ಸಲ್ಲಿಸಲು ಅವಕಾಶವಿದ್ದು, ಸಲ್ಲಿಸಬಹುದಾಗಿರುತ್ತದೆ. |

**4(B)(IV) ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗಧಿಪಡಿಸಲಾದ ನಿಧಾನಗಳು ಮತ್ತು ಕಟ್ಟುಪಾಡುಗಳು**

| | |
|---|---|
| ತೋಟಗಾರ | ವಹಿಸಲಾದ ಎಲ್ಲಾ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವುದು. |
| ತೋಟಗಾರಿಕೆ ಸಹಾಯಕ | ವಹಿಸಲಾದ ಎಲ್ಲಾ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವುದರ ಜೊತೆಗೆ ಸಸ್ಯ ಕ್ಷೇತ್ರ ಅಭಿವೃದ್ಧಿಯ ದಾಸ್ತಾನು ನಿರ್ವಹಣಾ ಲೆಕ್ಕವನ್ನು ಕ್ರಮಬದ್ದವಾಗಿ ಇಟ್ಟುಕೊಂಡು ನಿಗಧಿತ ಗುರಿ ಸಾಧನೆಗೆ ಅವಕಾಶ ಮಾಡಿಕೊಡುವುದು. |
| ಸಹಾಯಕ ತೋಟಗಾರಿಕೆ ಅಧಿಕಾರಿ | ತಾಲ್ಲೂಕಿನ ಘಟಕಾಧಿಕಾರಿಯಾಗಿ ಇಲಾಖೆಯ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದು, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಬೇಕಾಗಿದೆ. |

**<u>4(B)(V) ನೌಕರರು ಅವರವರ ಕರ್ತವ್ಯಗಳನ್ನು ನಿರ್ವಹಿಸುವಾದ ಉಪಯೋಗಿಸುವ ನಿಯಂತ್ರಣದಲ್ಲಿ ಇಟ್ಟುಕೊಂಡಿರುವ ನಿಯಮಗಳು/ ಸೂಚನೆಗಳು/ ಕೈಪಿಡಿಗಳು/ ದಾಖಲೆಗಳು ಮತ್ತು ನಿಬಂಧನೆಗಳು,</u>**

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು.
2. ಕರ್ನಾಟಕ ನಾಗರೀಕ ಸೇವಾ ನಿಯಮಗಳು (ವರ್ಗೀಕರಣ ನಿಯಂತ್ರಣ, ಮೇಲ್ಮನವಿ) ನಿಯಮಗಳು
3. ಕರ್ನಾಟಕ ಆರ್ಥಿಕ ಸಂಹಿತೆ
4. ಕಛೇರಿ ಕೈಪಿಡಿ
5. ವೃಂದ ಮತ್ತು ನೇಮಕಾತಿ ನಿಯಮಗಳು
6. ಆಯವ್ಯಯ ಕೈಪಿಡಿ
7. ಕರ್ನಾಟಕ ಖಜಾನೆ ಸಂಹಿತೆ
8. ಸಾದಿಲ್ವಾರು ವೆಚ್ಚ ಕೈಪಿಡಿ
9. ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ
10. ಇಲಾಖಾ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಆಫ್ ಪವರ್ಸ್.
11. ಸರ್ಕಾರದ ಅಧಿಸೂಚನೆಗಳು/ ಸುತ್ತೋಲೆಗಳು
12. ರಾಷ್ಟ್ರೀಯ ತೋಟಗಾರಿಕೆ ಯೋಜನೆಯ ಮಾರ್ಗಸೂಚಿ.

## 4(B)(VI) ಕಡತ ಶೀರ್ಷಿಕೆ:-

| ಕ್ರ.ಸಂ | ಶಾಖೆ | ಅಬ್ರಿವೇಷನ್ | ದಾಖಲೆಗಳ ಉಲ್ಲೇಖ |
|---|---|---|---|
| 1 | ಸಿಬ್ಬಂದಿ | EST | ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾಗಳ ಶಿಸ್ಥು ನಡತೆ ಮತ್ತು ಇತರೆ ವಿಷಯಗಳು |
| 2 | ತಾಂತ್ರಿಕ ಶಾಖೆ | AHO | ತಾಂತ್ರಿಕ ಕಡತಗಳು |

**4(B)(VII) ಪಾಲಿಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂಬಂಧದಲ್ಲಿ ಇರುವ ಏರ್ಪಾಡುಗಳು ಸಾರ್ವಜನಿಕ ಸದಸ್ಯರುಗಳ ಸಹಭಾಗಿತ್ವ ಮುಂತಾದ ವಿವರಗಳು**

ಅವಶ್ಯಕತೆಗೆ ಅನುಗುಣವಾಗಿ ನಿರ್ದೇಶನಾಲಯ ಹಾಗೂ ಸರ್ಕಾರದಿಂದ ಯಾವುದಾದರೂ ಮಾಹಿತಿ ಕೇಳಿದ್ದಲ್ಲಿ ಸಾರ್ವಜನಿಕರಿಂದ ಬಂದ ಅಭಿಪ್ರಾಯಗಳನ್ನು ಪರಿಶೀಲಿಸಿ ಅಗತ್ಯ ನಿರ್ಧಾರಕ್ಕಾಗಿ ನಿಯಂತ್ರಣಾಧಿಕಾರಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

**4(B)(VIII) ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ ಸದಸ್ಯರಿಂದ ರಚಿಸಲ್ಪಡುವ ನಿಗಮ ಕೌನ್ಸಿಲ್ ಬೋರ್ಡ್ ಸಮಿತಿ ಅಥವಾ ಇತರೆ ಬಾಡಿಗಳ ಪಟ್ಟಿ ಹಾಗೂ ಇಂತಹ ಕಮಿಟಿ ಮತ್ತು ಸಮಿತಿಗಳು ನಡೆಸುವ ಸಭೆ ಮತ್ತು ನಡವಳಿಗಳನ್ನು ಸಾರ್ವಜನಿಕರು ವೀಕ್ಷಿಸಬಹುದೇ ಅಥವಾ ಇಂತಹ ಸಭೆಗಳ ನಡವಳಿಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆಯೇ ?**

ತೋಟಗಾರಿಕೆ ಇಲಾಖೆಯ ಅಧೀನ ಯಾವುದೇ ನಿಗಮ ಕೌನ್ಸಿಲ್, ಬೋರ್ಡ್ ಸಮಿತಿಗಳು ಕಾರ್ಯನಿರ್ವಹಿಸುತ್ತಿಲ್ಲ.

**4(B)(IX) ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯಿತಿ) ಬೇಲೂರು ರವರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ದೂರವಾಣಿ ವಿವರಗಳ ಪಟ್ಟಿ**

| ಕ್ರ.ಸಂ. | ಹುದ್ದೆ | ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1. | ತೋಟಗಾರರು | ರತ್ನಮ್ಮ | 08177 291544 |
| 2. | ತೋಟಗಾರಿಕೆ ಸಹಾಯಕರು | ಖಾಲಿ ಹುದ್ದೆ | |
| 3. | ದ್ವಿತೀಯ ದರ್ಜೆ ಸಹಾಯಕರು | ಡಿ.ಮನೋಹರ | 08177 291544 |
| 4. | ಸಹಾಯಕ ತೋಟಗಾರಿಕೆ ಅಧಿಕಾರಿ | ಖಾಲಿ ಹುದ್ದೆ (4) | |
| 5. | ಸಹಾಯಕ ತೋಟಗಾರಿಕೆ ಅಧಿಕಾರಿ | ಬಸವೇಗೌಡ | 08177 291544 |
| 6. | ಸಹಾಯಕ ತೋಟಗಾರಿಕೆ ಅಧಿಕಾರಿ | ವಿಶ್ವನಾಥ | 08177 291544 |
| 7. | ಸಹಾಯಕ ತೋಟಗಾರಿಕೆ ನಿರ್ದೇಶಕರು | ಎನ್.ಎಸ್.ಫಣೀಂದ್ರ | 08177 291544 |

**4(B)(X) ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯಿತಿ) ಬೇಲೂರು ರವರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ಏಪ್ರಿಲ್-11 ರ ವೇತನದ ವಿವರಗಳ ಪಟ್ಟಿ**

| ಕ್ರ.ಸಂ. | ಹುದ್ದೆ | ಹೆಸರು | ವೇತನ |
|---|---|---|---|
| 1 | ತೋಟಗಾರರು | ರತ್ನಮ್ಮ | 9499/- |
| 2 | ತೋಟಗಾರಿಕೆ ಸಹಾಯಕರು | ಖಾಲಿ ಹುದ್ದೆ | -- |
| 3 | ದ್ವಿತೀಯ ದರ್ಜೆ ಸಹಾಯಕರು | ಡಿ.ಮನೋಹರ | 11861/- |
| 4 | ಸಹಾಯಕ ತೋಟಗಾರಿಕೆ ಅಧಿಕಾರಿ | ಖಾಲಿ ಹುದ್ದೆ (4) | -- |
| 5 | ಸಹಾಯಕ ತೋಟಗಾರಿಕೆ ಅಧಿಕಾರಿ | ಬಸವೇಗೌಡ | 19815/- |
| 6 | ಸಹಾಯಕ ತೋಟಗಾರಿಕೆ ಅಧಿಕಾರಿ | ವಿಶ್ವನಾಥ | 19815/- |
| 7 | ಸಹಾಯಕ ತೋಟಗಾರಿಕೆ ನಿರ್ದೇಶಕರು | ಎನ್.ಎಸ್.ಫಣೀಂದ್ರ | 24762/- |

4(B)(XI) ಆಯವ್ಯಯ ವಿತರಣೆ (2011-12

| ಕ್ರ.ಸಂ. | ಇಲಾಖೆ | ಯೋಜನೆಗಳು | ನಿಗದಿಪಡಿಸಿದ ಮೊತ್ತ |
|---|---|---|---|
| 1. | ತೋಟಗಾರಿಕೆ ಇಲಾಖೆ | ತಾಳೆ ಬೆಳೆ ಯೋಜನೆ | 27.80 |
| 2. | | ಅಲೂಗಡ್ಡೆ ಅಂಗಮಾರಿ ರೋಗ ನಿಯಂತ್ರಣ | 20.00 |
| 3. | | ತೋಟಗಾರಿಕೆ ಕ್ಷೇತ್ರ ನಿರ್ವಹಣೆ | 1.10 |
| 4. | | ತೆಂಗು ಬೇಸಾಯ ಯೋಜನೆ | 18.04 |
| 5 | | ಸಸ್ಯೋತ್ಪಾದನೆ | 0.0075 |
| 6. | | ರೈತರಿಗೆ ತರಬೇತಿ | 0.152 |
| 7. | | ರೈತರಿಗೆ ಸಹಾಯಧಡಿ ಸಸ್ಯ ಸಂರಕ್ಷಣಾ ಔಷಧಿ ಖರೀದಿಗೆ ಸಹಾಯ | 0.50 |
| 8. | | ವಿಶೇಷ ಘಟಕ ಯೋಜನೆ | 1.00 |
| 9. | | ರಾಷ್ಟ್ರೀಯ ತೋಟಗಾರಿಕೆ ಮಿಷನ್ | 68.371 |
| 10. | | ಸೂಕ್ಷ್ಮ ನೀರಾವರಿ ಯೋಜನೆ | 57.00 |
| 11. | | ಬಾಳೆಯಲ್ಲಿ ನಿಖರ ಬೇಸಾಯ | 23.97 |

**4(B)(XII) ಸಹಾಯಧನದೊಂದಿಗೆ ನಡೆಸುವ ಯೋಜನೆಗಳು, ಅಂತಹ ಯೋಜನೆಗಳ ವಿವರ**

1. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪ್ರದೇಶ ವಿಸ್ತರಣೆ ಹಾಗೂ ಇತರೆ ಚಟುವಟಿಕೆಗಳಿಗೆ ಸಹಾಯಧನ
2. ಸೂಕ್ಷ್ಮ ನೀರಾವರಿ ಯೋಜನೆಯಡಿ ಹನಿ ನೀರಾವರಿ ಪದ್ಧತಿ ಅಳವಡಿಸಿದ ರೈತರಿಗೆ ಸಹಾಯಧನ
3. ಸುವರ್ಣ ಭೂಮಿ ಯೋಜನೆಯಡಿ ಹೊಸದಾಗಿ ತೋಟಗಾರಿಕೆ ಚಟುವಟಿಕೆ ಕೈಗೊಳ್ಳುವ ರೈತರಿಗೆ ಸಹಾಯಧನ
4. ಯಂತ್ರಗಳ ಖರೀದಿಸಿ ರೈತರಿಗೆ ಸಹಾಯಧನ

**4(B)(XIII) ಇಲಾಖೆಯಿಂದ ಅತೋರೈಜೇಷನ್ ಮಂಜೂರಾದ ಅಥವಾ ಪರವಾನಗಿ ನೀಡಲಾದ ಮತ್ತು ಕಡಿಮೆ ದರದಲ್ಲಿ ಸೌಲತ್ತುಗಳನ್ನು ಪಡೆಯಲಾದ ರಸಿಪಿಯಂಟ್ಸ್‌ಗಳ ವಿವರ**

ಸರ್ಕಾರದ ಮಾರ್ಗಸೂಚಿ ಅನ್ವಯ ವಿವಿಧ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಅವರು ಔಷಧಿ, ಗೊಬ್ಬರ ಖರೀದಿಸಿದ ಮೊತ್ತಕ್ಕೆ ಸಹಾಯಧನವಾಗಿ ನೀಡುವುದು.

**4(B)(XIV) ಕುಗ್ಗಿಸಲಾದ ಎಲಾಕ್ಟ್ರಾನಿಕ್ಸ್ ಮಾದರಿಯಲ್ಲಿ ಲಭ್ಯವಿರುವ  ಮಾಹಿತಿಯ ವಿವರ, ದೊರಕುವಿಕೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ.**

ಎಲಕ್ಟ್ರಾನಿಕ್ಸ್ ಮಾದರಿಯಲ್ಲಿ ಲಭ್ಯವಿದೆ.

**4(B)(XV) ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶಗಳ ವಿವರಗಳು, ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು ಸಾರ್ವಜನಿಕ ಉಪಯೋಗಕ್ಕಾಗಿ ತೆರೆರಿದ್ದಾರೆ.**

ಸಾರ್ವಜನಿಕರಿಗೆ ಪ್ರಸಾರ ಮಾಧ್ಯಮ, ದಿನ ಪತ್ರಿಕೆ, ನಿಯತ ಕಾಲಿಕೆಗಳು, ಮಾಸಿಕ ಪತ್ರಿಕೆಗಳು, ಇಲಾಖೆಯ ಕೈಪಿಡಿಗಳು, ಕರಪತ್ರಗಳು, ಪುಸ್ತಕಗಳ ಮುಖಾಂತರ ಲಭುವಿರುತ್ತದೆ.

**4(B)(XVI) ಸಾರ್ವಜನಿಕ ಮಾಹಿತಿ ಅಧಿಕಾರಿಯ  ಹೆಸರು ಪದನಾಮ ಮತ್ತು ಇತರೆ ವಿವರಗಳು.**

***ಸಾರ್ವಜನಿಕ ಮಾಹಿತಿ ಅಧಿಕಾರಿ***

ಎನ್.ಎಸ್.ಫಣೀಂದ್ರ

ಸಹಾಯಕ ತೋಟಗಾರಿಕೆ ನಿರ್ದೇಶಕರು,

(ಜಿಲ್ಲಾ ಪಂಚಾಯಿತಿ) ಬೇಲೂರು

ದೂರವಾಣಿ ಸಂಖ್ಯೆ 08177 291544

***ಮೇಲ್ಮನವಿ ಪ್ರಾಧಿಕಾರ***

ತೋಟಗಾರಿಕೆ  ಉಪ ನಿರ್ದೇಶಕರು

ಉಪ ನಿರ್ದೇಶಕರ ಕಛೇರಿ,

ಜಿಲ್ಲಾ ಪಂಚಾಯಿತಿ, ಹಾಸನ

ದೂರವಾಣಿ ಸಂಖ್ಯೆ: 08172 268387

**4(B)(XVII) ನಿಗದಿ ಪಡಿಸಲಾದ ಇತರೆ ವಿಷಯಗಳು**

ಜಿಲ್ಲಾ ಆಡಳಿತ ಅಥವಾ  ಸರ್ಕಾರದಿಂದ ನಿಗಧಿಗೊಳಿಸಿದ ಹೆಚ್ಚುವರಿ ಕಾರ್ಯಕ್ರಮಗಳನ್ನು ಅಳವಡಿಸಿದ್ದಲ್ಲಿ ಅನುಷ್ಠಾನಗೊಳಿಸಲಾಗುವುದು.